**ಕರ್ನಾಟಕ ಸರ್ಕಾರ**

ಸಂಖ್ಯೆ: ಕಂಇ 158 ಟಿಎನ್ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:17.05.2020

**ಆದೇಶ**

ಕೇಂದ್ರ ಗೃಹ ಮಂತ್ರಾಲಯವು, ದೇಶದ ಎಲ್ಲಾ ಭಾಗಗಳಲ್ಲಿ COVID-19 ಹರಡುವುದನ್ನು ತಡೆಗಟ್ಟಲು ಆದೇಶ ಸಂಖ್ಯೆ 40-3/2020-ಡಿಎಂ-ಐ(ಎ) ದಿ.24-03-2020ರಂದು ಲಾಕ್‌ಡೌನ್ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ದಿ.25-03-2020 ರಿಂದ ಜಾರಿಗೆ ಬರುವಂತೆ 21 ದಿನಗಳ ಅವಧಿಗೆ ಆದೇಶ ಹೊರಡಿಸಲಾಗಿತ್ತು. ತರುವಾಯ, ಕೇಂದ್ರ ಗೃಹ ಮಂತ್ರಾಲಯವು ಆದೇಶ ಸಂಖ್ಯೆ 40-3/2020-ಡಿಎಂ-ಐ (ಎ), ದಿ. 14-04-2020ರಂದು ಲಾಕ್‌ಡೌನ್ ಅವಧಿಯನ್ನು ದಿ.03-05-2020 ರವರೆಗೆ ವಿಸ್ತರಿಸಲಾಗಿತ್ತು. ಇದರ ಪರಿಣಾಮವಾಗಿ, ಕರ್ನಾಟಕ ರಾಜ್ಯ ಸರ್ಕಾರವು ಆದೇಶ ಸಂ.ಕಂಇ 158 ಟಿಎನ್ಆರ್ 2020, ದಿ.22.04.2020ರಂದು ಲಾಕ್‌ಡೌನ್ ಕ್ರಮಗಳ ಬಗ್ಗೆ ಕ್ರೋಢೀಕೃತ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು ಮತ್ತು ಕಾಲಕಾಲಕ್ಕೆ ಸೇರ್ಪಡೆಗಳ ಮತ್ತು ಆದೇಶಗಳ ಮೂಲಕ ತಿದ್ದುಪಡಿಗಳನ್ನು ಹೊರಡಿಸಿ, ಅವುಗಳು ದಿ. 03-05-2020 ರವರೆಗೆ ಜಾರಿಯಲ್ಲಿದ್ದವು.

ಆದಾಗ್ಯೂ, ಕೇಂದ್ರ ಗೃಹ ಮಂತ್ರಾಲಯವು, ಆದೇಶ ಸಂಖ್ಯೆ 40-3/2020-ಡಿಎಂ-ಐ (ಎ) ದಿ.01-05-2020ರಂದು ಲಾಕ್‌ಡೌನ್ ಅವಧಿಯನ್ನು ದಿ. 04-05-2020 ರಿಂದ ಇನ್ನೂ ಎರಡು ವಾರಗಳವರೆಗೆ ವಿಸ್ತರಿಸಿ ಮತ್ತು ಲಾಕ್‌ಡೌನ್ ಕ್ರಮಗಳ ಕುರಿತು ಹೊಸ ಮಾರ್ಗಸೂಚಿಗಳನ್ನು ಸಹ ಬಿಡುಗಡೆಗೊಳಿಸಿ ಆದೇಶಿಸಿದ್ದು, ಇವುಗಳು ದಿ. 04-05-2020 ರಿಂದ ಎರಡು ವಾರಗಳ ಅವಧಿಗೆ ಜಾರಿಯಲ್ಲಿರುತ್ತವೆ.

ವಿಪತ್ತು ನಿರ್ವಹಣಾ ಕಾಯ್ದೆ, 2005ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ, ಈ ಕೆಳಗೆ ಸಹಿ ಮಾಡಲಾದ ನಾನು, ಕರ್ನಾಟಕ ಸರ್ಕಾರದ ಎಲ್ಲಾ ಇಲಾಖೆಗಳಿಗೆ, ಜಿಲ್ಲಾಧಿಕಾರಿಗಳಿಗೆ, ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಮತ್ತು ಇತರ ಇಲಾಖಾ ಮುಖ್ಯಸ್ಥರುಗಳಿಗೆ ಕೋವಿಡ್-19 ನಿಯಂತ್ರಣಕ್ಕೆ ಪ್ರಸ್ತುತ ಜಾರಿಯಲ್ಲಿರುವ ರಾಜ್ಯ ಸರ್ಕಾರದ ಆದೇಶ ಸಂ. ಕಂಇ 158 ಟಿಎನ್ಆರ್ 2020, ದಿ.02.05.2020ರಂದು ಹೊರಡಿಸಿರುವ ಹೊಸ ಮಾರ್ಗಸೂಚಿಗಳಲ್ಲಿನ ಕ್ರಮಗಳನ್ನು ಕಡ್ಡಾಯವಾಗಿ ಮುಂದಿನ ಆದೇಶದವರೆಗೆ ಅಥವಾ ದಿ.19.05.2020ರ ಮಧ್ಯರಾತ್ರಿಯ 24:00ಗಂಟೆಯವರೆಗೆ ಇವುಗಳಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಮುಂದುವರೆಸಿ ಆದೇಶಿಸಿದೆ.

ಟಿಎಂವಿಜಯಭಾಸ್ಕರ್
**(ಟಿ.ಎಂ.ವಿಜಯ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಅಧ್ಯಕ್ಷರು

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು.

Scanned with CamScanner